ಓ ಎಸ್ ನಂ.35/2021
ಡಿ.ಡಬ್ಲ್ಯೂ -3 ಬಾಬುಬಾಯಿ ಗಂಡ ಭೀಮರಾವ್ ಖಂಡೇಕರ್

**(ಇಂದು ದಿನಾಂಕಃ 17-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಎಸ್ ಜಿ ಹೆಚ್ ವಕೀಲರಿಂದ.

ವಾದಿ ರುಕ್ಮಾಬಾಯಿ ೧ನೇ ಪ್ರತಿವಾದಿಯಾದ ಖಂಡುರವರ ಅಕ್ಕ ಎಂದರೆ ಸರಿ. ವಾದಿಗೆ ೧ ಮತ್ತು ೨ನೇ ಪ್ರತಿವಾದಿಗಳು ಯಾವುದೆ ಭಾಗ ನೀಡಿಲ್ಲ ಎಂದರೆ ಸರಿ.ದಾವಾ ಜಮೀನುಗಳು ಮೊದಲು ವಾದಿ ಮತ್ತು ೧ನೇ ಪ್ರತಿವಾದಿಯ ತಂದೆಯಾದ ಯಶವಂತರವರ ಹೆಸರಿನಲ್ಲಿ ಇದ್ದವು ಎಂದರೆ ಸರಿ. ಯಶವಂತರವರ ಮರಣಾ ನಂತರ ಅವರ ಮಗನಾದ ೧ನೇ ಪ್ರತಿವಾದಿ ಖಂಡುರವರ ಹೆಸರಿನಲ್ಲಿ ಜಮೀನು ಆಗಿದ್ದವು ಎಂದರೆ ನನಗೆ ಗೊತ್ತಿಲ್ಲ. ೧ನೇ ಪ್ರತಿವಾಧಿ ಖಂಡುರವರಿಗೆ ಮದ್ಯದಲ್ಲಿ ಕಣ್ಣು ಹೋಗಿರುತ್ತವೆ ಎಂದರೆ ಸರಿ. ಆ ನಂತರ ೧ನೇ ಪ್ರತಿವಾದಿಯ ಹೆಂಡತಿಯಾದ ೨ನೇ ಪ್ರತಿವಾದಿ ತನ್ನ ಹೆಸರಿನಲ್ಲಿ ಜಮೀನು ಮಾಡಿಕೊಂಡಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ.

೨. ನಾನು ೨ನೇ ಪ್ರತಿವಾದಿಯಾದ ಗಂಗುಬಾಯಿರವರಿಂದ ಜಮೀನು ಖರೀದಿಸಿರುತ್ತೇನೆ. ನಾನು ೨೦೨೨ ರಲ್ಲಿ ಜಮೀನನ್ನು ಖರೀದಿಸಿರುತ್ತೇನೆ. ವಾದಿ ದಾವೆ ಹಾಕಿದ ವಿಚಾರ ನಾನು ಜಮೀನು ಖರೀದಿ ಮಾಡುವಾಗ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ೨ನೇ ಪ್ರತಿವಾದಿ ನನಗೆ ದಾವೆಯ ವಿಚಾರ ತಿಳಿಸಿರಲಿಲ್ಲ. ನಾನು ೨ನೇ ಪ್ರತಿವಾದಿ ಗಂಗುಬಾಯಿರವರ ತಂಗಿಯಾಗಿರುತ್ತೇನೆ. ೨ನೇ ಪ್ರತಿವಾದಿ ಈ ದಾವೆಯ ವಿಚಾರೆ ನನಗೆ ತಿಳಿಸಿದ್ದರೂ ಸಹ ನಾನು ಜಮೀನು ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ೧೦ ಲಕ್ಷ ೪೮ ಸಾವಿರ ರೂಪಾಯಿಗೆ ಜಮೀನು ಖರೀದಿ ಮಾಡಿರುತ್ತೇನೆ. ವಾದಿಗೆ ಜಮೀನು ಕೊಡಬಾರದು ಎಂಬ ಉದ್ದೇಶದಿಂದ ನಾನು ನನ್ನ ಅಕ್ಕಳಾದ ೨ನೇ ಪ್ರತಿವಾದಿಯ ಜೊತೆಗೆ ಸೇರಿಕೊಂಡು ಯಾವುದೆ ಹಣ ನೀಡದೆ ಒಂದು ಸುಳ್ಳು ಖರೀದಿ ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ

ಗಂಡ ಕೂಲಿ ಕೆಲಸ ಮಾಡುತ್ತಾರೆ. ನಮಗೆ ೫ ಎಕರೆ ಜಮೀನು ಇರುತ್ತದೆ. ಅದು ಒಣಬೇಸಾಯ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಜಮೀನಿನಿಂದ ನಮಗೆ ಒಂದು ವರ್ಷ ಆದಾಯ ಬರುತ್ತದೆ ಮತ್ತು ಒಮ್ಮೊಮ್ಮೆ ಏನೂ ಬರುವುದಿಲ್ಲ.

೩. ನಾನು ದುಡಿದು ಮತ್ತು ನನ್ನ ಮಕ್ಕಳು ದುಡಿದು ಹಣವನ್ನು ತಂದಿರುತ್ತೇವೆ. ನಾನು ೫ ಲಕ್ಷ ರೂಪಾಯಿ ಹಣ ಬ್ಯಾಂಕಿನಲ್ಲಿ ಇಟ್ಟ ಹಣವನ್ನು ಮತ್ತು ೫ ಲಕ್ಷ ರೂಪಾಯಿ ಮನೆಯಲ್ಲಿ ಮತ್ತು ಇತರರಿಂದ ತೆಗೆದುಕೊಂಡು ಜಮೀನು ಖರೀದಿ ಮಾಡಿರುತ್ತೇನೆ. ಯಾವ ಬ್ಯಾಂಕಿನಲ್ಲಿ ಹಣ ಇಟ್ಟಿದ್ದೆ ಎಂದು ಅದರ ಖಾತೆ ಸಂಖ್ಯೆ ಹೇಳಲು ನನಗೆ ಆಗುವುದಿಲ್ಲ. ನಾನು ಖರೀದಿ ಮಾಡಿದ ಜಮೀನು ಈಗಲೂ ಕೂಡಾ ವಾದಿ ಮತ್ತು ೧ನೇ ಪ್ರತಿವಾದಿಯ ಸ್ವಾಧೀನದಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ೨ನೇ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಒಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾನು ಪ್ರತಿವಾದ ಪತ್ರ ಸಲ್ಲಿಸಿರುತ್ತೇನೆ. ನಾನು ಯಾವುದೆ ಪ್ರತಿವಾದ ಪತ್ರ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.